ಅ) *1995-96ರಲ್ಲಿ ಮಂಜೂರಾದ ಹೊಸ ಕಾಮಗಾರಿಗಳು ಯಾವುವು; (ವಿವರ ಕೊಡುವುದು);*

ಇ) *ಮಾರ್ಕಂದೇಯ ನದಿಗೆ ಮಲ್ಲಾಪೂರ ಮತ್ತು ಹುಕ್ಕೆರಿ ತಾಲೂಕಿನ ಯಲ್ಲಾಪುರ ಮಧ್ಯದಲ್ಲಿ ಬ್ರಿಡ್ಜ ಕಂ ಬಾಂದಾರ ಮಂಜೂರಾಗಿದಿಯೇ;*

ಈ) *1995-96ರಲ್ಲಿ ಮಂಜೂರು ಮಾಡಲು ಉದ್ದೇಶಿಸಿರುವರೆ?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಎಂಟು ಕಾಮಗಾರಿಗಳು. (ವಿವರ ಲಗತ್ತಿಸಿದೆ).

ಆ) ಗೋಕಾಕ್ ತಾಲ್ಲೂಕಿನ ಯಾದವಾಡ ಗ್ರಾಮದ ಪ್ರವಾಹ ನಿಯಂತ್ರಣ ಯೋಜನೆ - 3ನೇ ಹಂತದಲ್ಲಿ ಮಾಂಜೂರಾಗಿದೆ.

ಇ) ಇಲ್ಲ.

ಈ) ಇಲ್ಲ.

ಗೋಕಾಕ್ ತಾಲ್ಲೂಕಿನಲ್ಲಿ ಕೈಗೊಳ್ಳಲಾಗುತ್ತಿರುವ ಸಣ್ಣ ನೀರಾವರಿ ಕಾಮಗಾರಿಗಳ ವಿವರ.

1. ಕೌಜಲಗಿ ಬಳಿ ಹೊಸ ಕೆರೆ ನಿರ್ಮಾಣ.
2. ಶಿಲ್ತಿಭಾವಿಯ ಸಣ್ಣ ನೀರಾವರಿ ಕೆರೆಯ ಹೂಳೆತ್ತುವ ಕಾಮಗಾರಿ.
3. ಔರಾದ್ ಬಳಿ ಸೇತುವೆಯನ್ನೊಳಗೊಂಡ ಬಂಧಾರ ನಿರ್ಮಾಣ.
4. ಸುಧೋಳಿ ಬಂಧಾರದ ಅಭಿವೃದ್ಧಿ.
5. ಭರನಹಟ್ಟಿ ಬಳಿ ಏತ ನೀರಾವರಿ ಯೋಜನೆಯ ನಿರ್ಮಾಣ.
6. ತಳಕನಾಳ ಏತ ನೀರಾವರಿ ಯೋಜನೆಯ ನಿರ್ಮಾಣ.
7. ಕಾಳಿಗೋಡ ಕೌಜಗಿ ನೀರಾವರಿ ಯೋಜನೆಯ ನಿರ್ಮಾಣ.
8. ತಗಡಿ ಏತ ನೀರಾವರಿ ಯೋಜನೆಯ ಬಿದ್ದು ಹೋದ ಜಾಕವೆಲ್ ಮತ್ತು ನೀರೆತ್ತುವ ಯಂತ್ರಗಳ ದುರಸ್ತಿ.

ಪಡೆಕನೂರು ಗ್ರಾಮದ ಕೆರೆ.

367 - ಶ್ರೀ ಎಸ್.ಎಂ. ದೇಸಾಯಿ (ಹೂವಿನ ಹಿಪ್ಪರಗಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಪಡೇತನೂರ ಗ್ರಾಮದ ಕೆರೆಯಿಂದ ನೀರು ಬಿಡುವ ಜಮೀನುಗಳ ವಿಸ್ತೀರ್ಣವೆಷ್ಟು?*

ಆ) *ಎಷ್ಟು ಏಕರೆ ಜಮೀನುಗಳಿಗೆ ನೀರು ಬಿಡಲಾಗುತ್ತಿದೆ;*

ಇ) *ಪೂರ್ತಿ ಕ್ಷೇತ್ರಕ್ಕೆ ನೀರು ಬಿಡದಿರಲು ಕಾರಣವೇನು?*